ANUBHAVS



# ಅಪಘಾತ ಭಯ ತೊಲಗಿ ಅಕಾಲ ಮರಣ ತಪ್ಪುವುದು

© Copyright 2010, Manasamarthyadata.com

manasamarthyadata.com



***- ಗಣೇಶ್ ಪುರೋಹಿತ್ , ಪುಣೆ***

ನೀವು  ಎಲ್ಲಿಯೇ ಇರಿ ದಟ್ಟ ಅರಣ್ಯದಲ್ಲಿ, ಮರುಭೂಮಿಯಲ್ಲಿ ಅಥವಾ ಸಮುದ್ರ ಮಧ್ಯದಲ್ಲಿ ನೀವುಯಾವುದಾದರು ಸಂಕಟದಲ್ಲಿ ಸಿಲುಕಿದ್ದು ನಿಮ್ಮ ಮಾನವೀ ಪ್ರಯತ್ನಗಳಿಂದ ಈ ಸಂಕಟದಿಂದ ಪಾರಾಗುವುದು ಶಕ್ಯವಿಲ್ಲವೆಂದಾದರೆ, ಆಗ ನೀವು ಸಂಪೂರ್ಣ ಪ್ರೇಮ ಭಾವದಿಂದ ಈ ಬಾಪೂವನ್ನು ಕರೆಯಿರಿ. ತತ್ಕ್ಷಣವೇ ನಿಮ್ಮ ಬಾಪೂ ನಿಮ್ಮ ಸಹಾಯಕ್ಕಾಗಿ ನಿಮ್ಮ ಹತ್ತಿರ ಇರುವವರು. ಬಾಪೂರವರ ಪ್ರವಚನದ ಈ ಸಾಲುಗಳು 12 ಮೇ 2005ರಂದು ನನ್ನ ಜೀವನದಲ್ಲಿ ಅಕ್ಷರಶಃ ನಿಜವಾದವು.

ಮಧ್ಯಾಹ್ನದ ಊಟವಾದ ನಂತರ ಸ್ವಲ್ಪ ಕಾಲು ಸಡಿಲಗೊಳಿಸುವಾ ಎಂದು ಹೊರಬಿದ್ದೆನು. ನನ್ನೊಂದಿಗೆ ನನ್ನ ಸಹಕಾರಿಗಳೂ ಇದ್ದರು. ನಮ್ಮ ನಮ್ಮಲ್ಲಿಯೇ ಹರಟೆ ಹೊಡೆಯುತ್ತಾ ನಡೆಯುತ್ತಿದ್ದೆವು. ಹಠತ್ತಾನೇ ಕೆಲವು ಮಿತ್ರರ ಕಿರುಚುವಿಕೆ ಕೇಳಿ ಬಂದಿತು. ಏನೆಂದು ಎದುರು ನೋಡಿದಾಗ ಎದುರುಗಡೆಯಿಂದ ಒಂದು ದನವು ಮದವೇರಿದಂತೆ ಓಡಿ ಬರುತ್ತಿತ್ತು. ನನ್ನ ಸಹಕಾರಿ ಮಿತ್ರರು ರಸ್ತೆಯ ಬದಿಗೆ ನಿಂತಿದ್ದ ಮೋಟಾರಿನ ಆಧಾರ ಪಡೆದುಕೊಂಡು ಬದಿಗೆ ಸರಿದು ನಿಂತರು. ಆದರೆ ನನಗೆ ಮಾತ್ರ ಬದಿಗೆ ಸರಿಯಲು ಅವಕಾಶವೂ ಇರಲಿಲ್ಲ, ಸ್ಥಳವೂ ಇರಲಿಲ್ಲ. ಬಿರುಗಾಳಿಯಂತೆ ಓಡಿಬರುತ್ತಿದ್ದ ದನವು ಸೀದಾ ನನ್ನ ದಿಕ್ಕೀಗೇ ಬರುತ್ತಿತ್ತು. ನನ್ನ ಮತ್ತು ಅದರ ನಡುವೆ ಕೇವಲ 5-6 ಅಡಿಗಳ ಅಂತರವಿದ್ದಿತು. ನಾನು ಏನೂ ತೋಚದೆ ನಿಂತಲ್ಲೇ ಸ್ತಬ್ಧವಾಗಿ ನಿಂತುಬಿಟ್ಟೆನು ಹಾಗೂ ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡು ಮನಸ್ಸಿನಲ್ಲಿಯೇ ಬಾಪೂ ಎಂದಷ್ಟೇ ಹೇಳಿದೆನು ಅಷ್ಟೇ. ಕ್ಷಣಾರ್ಧದಲ್ಲಿ ನನಗೆ ಜೋರಾಗಿ ಬ್ರೇಕ್ ಹಾಕಿದಂತಹ ಶಬ್ದ ಕೇಳಿದುದರಿಂದ ನಾನು ಕಣ್ತೆರೆದೆನು. ಆಗ ಎದುರಿನಲ್ಲಿ ನೋಡುವುದೇನು. ಆ ಓಡಿ ಬರುತ್ತಿದ್ದಂತಹ ದನವು ತನ್ನ ಎದುರಿನ ಎರಡು ಕಾಲುಗಳನ್ನು ಅಗಲಿಸಿ ನನ್ನಿಂದ ಕೇವಲ 1 ಅಥವಾ 2 ಅಡಿಗಳ ಅಂತರದಲ್ಲಿ ಸ್ತಬ್ಧವಾಗಿ ನಿಂತಿತು. ಯಾರೋ ಅದರ ಕೊಂಬುಗಳನ್ನು ಹಿಡಿದು ನಿಲ್ಲಿಸಿರುವಂತೆಯೇ ಕಾಣಿಸಿತು. ಅಷ್ಟರಲ್ಲಿ ಅಲ್ಲಿಗೆ ಆ ದನದ ಮಾಲಿಕ ಬಂದು ಅದನ್ನೆಳೆದುಕೊಂಡು ಹೋದನು.



ನನ್ನ ಸಹಕಾರಿಗಳು ಮತ್ತು ಅಲ್ಲಿ ನೆರೆದಿದ್ದ ಜನರು ಈ ಎಲ್ಲಾ ಘಟನೆಯನ್ನು ನೋಡುತ್ತಿದ್ದರು. ಕೇವಲ 5-10 ಸೆಕೆಂಡುಗಳಲ್ಲಿ ಈ ಘಟನೆ ಜರಗಿತು.  ಬೇರೆ ಯಾರಿಂದಲೂ ಯಾವುದೇ ರೀತಿ ಸಹಾಯ ಮಾಡುವುದು ಈ ಸಂದರ್ಭದಲ್ಲಿ ಸಾಧ್ಯವೇ ಇರಲಿಲ್ಲ. ಆದರೆ, ನಮ್ಮ ಪ್ರಿಯ ಬಾಪೂರವರಿಗೆ ಯಾವುದು ಅಶಕ್ಯ? ಕ್ಷಣಮಾತ್ರವೂ ವಿಳಂಭ ಮಾಡದೇ ನಾನು ಕಾಪಾಡಿ....ಕಾಪಾಡಿ... ಎಂದು ಮೊರೆಯಿಡುವುದಕ್ಕೂ ಮುಂಚೆಯೇ ನೋಡಿದ ಅಲ್ಲಿ ನೆರೆದಿದ್ದವರಿಗೆಲ್ಲಾ ತಂತಮ್ಮ ಕಣ್ಣುಗಳನ್ನೇ ನಂಬುವುದು ಸಾಧ್ಯವಾಗುತ್ತಿರಲಿಲ್ಲ. ಎಲ್ಲರೂ ಆಶ್ಚರ್ಯಚಕಿತರಾಗಿ ನೋಡುತ್ತಲೇ ಇದ್ದರು. ಆದರೆ ನಾನು ಮಾತ್ರ ಮನಸ್ಸಿನೊಳಗಿಂದಲೇ ಬಾಪೂರವರಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದೆನು...ಸತತ ಬೆಂಗಾವಲಾಗಿ ನನ್ನ ಬಾಪೂ ಇರುವಾಗ ಯಾರೇನು ಮಾಡುವುದು ಸಾಧ್ಯ?

ANUBHAVS

# HARI OM

© Copyright 2010, Manasamarthyadata.com

manasamarthyadata.com